
**ಕನ್ನಡದಲ್ಲಿ ವಿಮರ್ಶೆ ಬರೆದವರು ನಿಮ್ಮನ್ನು ಬಿಟ್ಟರೆ ಬೇರೆ ಯಾರೂ ಇಲ್ಲ. ನೀವು ವಿಮರ್ಶೆಯನ್ನೇ ಮುಖ್ಯವಾಗಿ ಬರೆಯುವುದಕ್ಕೆ ಕಾರಣ?**

ನನ್ನ ವಿಮರ್ಶೆಯಾಗಲಿ, ಸಂಶೋಧನೆಯಾಗಲಿ, ಸಂಶೋಧನಾ ಮಾರ್ಗದರ್ಶನವಾಗಲಿ (ಹದಿನಾರು ಜನ ನನ್ನ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಮಾಡಿದ್ದಾರೆ) ಅವುಗಳಿಗೆಲ್ಲ ಒಂದಕ್ಕೊಂದು ಸಂಬಂಧ ಇದೆ. ನಾನು ನನ್ನ ಪಿಎಚ್.ಡಿ. ಥೀಸಿಸ್ ಮಾಡಿದ್ದು ಕಾಮಿಡಿಯ ಮೇಲೆ. ಕ್ಲಾಸ್‌ರೂಮ್‌ನಲ್ಲಿ ಬೋಧನೆ ಮಾಡುವಾಗ ನನಗೆ ಕೆಲವು ಸಮಸ್ಯೆಗಳು ಬರುತ್ತಿದ್ದವು. ಗ್ರೀಕ್ ಕಾಮಿಡಿಯ ಪ್ರಕಾರವೇ ಬೇರೆ, ಶೇಕ್ಸ್‌ಪಿಯರ್‌ನ ನಾಟಕಗಳಲ್ಲಿನ ಕಾಮಿಡಿಯ ರೀತಿಯೇ ಬೇರೆ. ಅವುಗಳನ್ನು ಬೋಧಿಸುವ ರೀತಿಯೂ ಬೇರೆಯೇ. ಅದುವರೆಗೆ ಕಾಮಿಡಿ ಅಂದಕೂಡಲೇ ಎಲ್ಲರೂ ನಗುವಿನ ಬಗ್ಗೆ ಬರೆದುಬಿಡುತ್ತಿದ್ದರು. ಆದರೆ ಕಾಮಿಡಿ ಅನ್ನುವುದು ಟ್ರ್ಯಾಜಿಡಿಯಷ್ಟೇ ಮಹತ್ವದ್ದು ಎಂದು ಯಾರೂ ಗಂಭೀರವಾಗಿ ಯೋಚಿಸಿಯೇ ಇರಲಿಲ್ಲ. ಹೀಗಾಗಿ ಅದರಲ್ಲಿ ಹೆಚ್ಚು ತತ್ತ್ವಶಾಸ್ತ್ರಜ್ಞರು, ಮನಃಶಾಸ್ತ್ರಜ್ಞರು ಇರಲಿಲ್ಲ. ಈ ಎಲ್ಲವನ್ನೂ ಗಮನಿಸಿದಾಗ 'ಕಾಮಿಡಿ' ಕುರಿತು ನನಗೆ ಕುತೂಹಲ ಹುಟ್ಟಿತು. ಇದರ ಕುರಿತು ಸಂಶೋಧನೆ ಮಾಡಬೇಕು ಅನಿಸಿತು.



ಆಮೂರರೊಂದಿಗೆ ದಿವಾಕರ್

ಆಗಿನ ಕಾಲದಲ್ಲಿ ಎಂ.ಎ.ದಲ್ಲಿ ಸರಿಯಾಗಿ ಅಂಕಗಳು ಬಂದಿಲ್ಲ ಎಂದರೆ ಅದಕ್ಕೆ ಕಾಂಪನ್ಸೇಟರಿ ಅಂತ ಪಿಎಚ್.ಡಿ. ಮಾಡುತ್ತಿದ್ದರು. ಅದಕ್ಕೆ ಮಾರ್ಗದರ್ಶಕರೂ ಸಾಕಷ್ಟಿರಲಿಲ್ಲ. ಆಗ ಭಾರತಕ್ಕೆ ಬರುತ್ತಿದ್ದ ಆಂಗ್ಲೋ–ಇಂಡಿಯನ್ ಅಧಿಕಾರಿಗಳ ಹೆಂಡತಿಯರಿಗೆ ಕೆಲಸ ಇರುತ್ತಿರಲಿಲ್ಲ. ಅವರು ಮನೆಯಲ್ಲಿಯೇ ಕುಳಿತು ಏನೇನೋ ಕಲ್ಪಿಸಿಕೊಂಡು ಕಾದಂಬರಿ ಬರೆಯುತ್ತಿದ್ದರು. ಪಿಎಚ್.ಡಿ. ಮಾರ್ಗದರ್ಶಕರು ಬುದ್ಧಿವಂತಿಕೆಯಿಂದ ತಮ್ಮ ಶಿಷ್ಯಂದಿರಿಗೆ ಆ ಲೇಖಕಿಯರ ಮೇಲೆ ಪಿಎಚ್.ಡಿ. ಮಾಡು ಎಂದು ಹೇಳುತ್ತಿದ್ದರು. ಆ ಕಾದಂಬರಿಗಳ ಸಾರ ಬರೆದರೂ ಪಿಎಚ್.ಡಿ. ಸಿಕ್ಕಿಬಿಡುತ್ತಿತ್ತು. ನಾನು ಕಾಮಿಡಿ ಎಂಬ ವಿಷಯವನ್ನು ಪಿಎಚ್.ಡಿ. ಸಂಶೋಧನೆಗೆ ಆಯ್ದುಕೊಂಡಾಗ ಎಲ್ಲರೂ 'ಈ ವಿಷಯದ ವಿಸ್ತಾರ ಬಹಳ ಇದೆ. ಪಿಎಚ್.ಡಿ. ಮಾಡುವುದು ಕಷ್ಟ' ಎಂದರು. ನಾನು 'ಅದೇ ವಿಷಯವನ್ನು ಮಾಡುತ್ತೇನೆ. ಪಿಎಚ್.ಡಿ. ಸಿಗದೇ ಹೋದರೂ ಪರವಾಗಿಲ್ಲ. ನನ್ನ ಪ್ರಬಂಧವನ್ನು ಪುಸ್ತಕರೂಪದಲ್ಲಿ ಪ್ರಕಟಿಸಿದರಾಯಿತು' ಎಂದು ನಿರ್ಧರಿಸಿದೆ. ಇದೊಂದು ಉದಾಹರಣೆ ಅಷ್ಟೆ. ನನ್ನ ಎಲ್ಲ ಸಂಶೋಧನೆಗಳಿಗೂ ಹೀಗೆ ಕ್ಲಾಸ್‌ರೂಮ್‌ನ ಒಂದು ಸಂಬಂಧ ಇದೆ. ನಾನು ಆಗ ಬರೆದ ವಿಮರ್ಶೆಯ ಪ್ರಮಾಣ ನೋಡಿದರೆ ಈಗ ಆಶ್ಚರ್ಯ ಅನಿಸುತ್ತದೆ.

ನಮ್ಮ ಶೈಕ್ಷಣಿಕ ಪದ್ಧತಿಯಲ್ಲೊಂದು ವಿಲಕ್ಷಣ ಗುಣ ಇದೆ. ನಾನು ಸಂಶೋಧನೆ ಮಾಡಿದ್ದು ಕಾಮಿಡಿಯ ಕುರಿತಾಗಿದ್ದರೂ ತರಗತಿಯಲ್ಲಿ ಬೇರೆ ಏನೇನೋ ಕಲಿಸಬೇಕಾಯ್ತು. ಇಂಗ್ಲಿಷ್ ವಿಭಾಗದಲ್ಲಿ ಇರುತ್ತಿದ್ದವರೇ ಎರಡು ಮೂರು ಜನ. ಅವರೇ ಎಲ್ಲ ವಿಷಯಗಳನ್ನೂ ಕಲಿಸಬೇಕಾಗಿತ್ತು. ಹೀಗಾಗಿ ನನ್ನ ಸಂಶೋಧನಾ ವಿಷಯದ ಬಗ್ಗೆ ಮತ್ತೆ ಗಮನ ಕೇಂದ್ರೀಕರಿಸಲೂ ಸಾಧ್ಯವಾಗಲಿಲ್ಲ. 'ಸಂಸ್ಕೃತ ಸಾಹಿತ್ಯದಲ್ಲಿ ಹಾಸ್ಯ' ಎಂಬ ವಿಷಯದ ಕುರಿತು ಸಂಶೋಧನೆ ಮಾಡಿ ಬರೆಯಬೇಕು ಎಂದು ನನಗೆ ತುಂಬಾ ಆಸೆ ಇತ್ತು. ಯಾಕೆಂದರೆ 'ಪೌರಾತ್ಯರಿಗೆ ಹಾಸ್ಯಪ್ರಜ್ಞೆಯೇ